# ಉಪನಿಷತ್ತುಗಳಲ್ಲಿ ತತ್ತ್ವಜಿಜ್ಞಾಸೆ

◆ ಸ್ವಾಮಿ ವೀರೇಶಾನಂದ

**ಮ**ನುಷ್ಯ ಚಿಂತನಶೀಲ ಪ್ರಾಣಿ ಎನ್ನುತ್ತಾರೆ ವಿಜ್ಞಾನಿಗಳು. ಆದರೆ ಮನುಷ್ಯ ಪ್ರಾಣಿಯಾಗಿಯೇ ಉಳಿಯಬೇಕಾಗಿಲ್ಲ. ತನ್ನ ವಿಚಾರ ಶಕ್ತಿಯ ಮೂಲಕ ಪ್ರಾಣಿತನವನ್ನು ಕಳೆದುಕೊಂಡು ದೈವತ್ವಕ್ಕೆ ಏರಬಹುದು ಎನ್ನುತ್ತದೆ ಭಾರತೀಯ ಪರಂಪರೆ. ಈ ಪರಂಪರೆಯ ಮೂಲಸ್ರೋತವಿರುವುದು ಉಪನಿಷತ್ತುಗಳಲ್ಲಿ. ಇಡೀ ಜಗತ್ತಿನಲ್ಲಿ ಅತ್ಯಂತ ಪುರಾತನವಾದ, ಅಷ್ಟೇ ಅತ್ಯುತ್ಕೃಷ್ಟವಾದ ತಾತ್ತ್ವಿಕ ಜಿಜ್ಞಾಸೆ ಆರಂಭವಾದದ್ದು, ನೂರಾರು ವರ್ಷಗಳ ಕಾಲ ಅನೂಚಾನವಾಗಿ ನಡೆದುಕೊಂಡು ಬಂದಿದ್ದು ಮತ್ತು ತನ್ನ ಮೇರುಶಿಖರವನ್ನು ಪಡೆದಿದ್ದು ಉಪನಿಷತ್ ವಾಙ್ಮಯದಲ್ಲಿಯೇ ಎನ್ನುವುದು ನಿರ್ವಿವಾದ.

ಮಾನವನಿಗೆ ವಿವೇಚನಾಶಕ್ತಿಯಿದೆ. ಆದ್ದರಿಂದಲೇ ಅವನನ್ನು ಮಾನವ ಎಂದು ಕರೆಯುವುದು. ಮನಸ್ಸಿಗೆ ಇರುವ ವಿಶೇಷ ಸಾಮರ್ಥ್ಯ ಚಿಂತನಾಶಕ್ತಿ. ಈ ಚಿಂತನಾಶಕ್ತಿಯಾದರೋ ಕೇವಲ ಲೌಕಿಕ ಚಿಂತನೆಗೆ ಮಿತವಾಗಿದೆಯೇ? ಇಲ್ಲ, ಮಾನವ ವಿಚಾರ ಶಕ್ತಿಯ ಮೂಲಕ ತನ್ನ ಸುತ್ತಲಿನ ಇರುವಿಕೆಯ, ಆವಶ್ಯಕತೆಗಳ ಮತ್ತು ಸಮಸ್ಯೆಗಳ ಆಚೆಗೂ ಜಿಗಿಯಬಲ್ಲ, ತಾನು ಕಣ್ಣಲ್ಲಿ ನೋಡಲಾಗದ್ದನ್ನು ನೋಡಬಲ್ಲ, ತಾನು ಕಿವಿಯಲ್ಲಿ ಕೇಳಲಾಗದ್ದನ್ನು ಆಲಿಸಬಲ್ಲ. ತನ್ನ ಇಂದ್ರಿಯಗಳ ಸೀಮೆಯನ್ನು ದಾಟಿ ವಿಶ್ವ ರಹಸ್ಯದ ಸವಾಲನ್ನು ಸ್ವೀಕರಿಸಿ, ಅದನ್ನು ಭೇದಿಸಲೂ ಪ್ರಯತ್ನಿಸಬಲ್ಲ. ಅಷ್ಟೇ ಅಲ್ಲ, ಅದರಲ್ಲಿ ಬಹುತೇಕ ಸಫಲನಾಗಲೂ ಬಲ್ಲ. ಅಂತಹ ಮಹೋನ್ನತ ಪ್ರಯತ್ನದ ಚರಮ ಸೀಮೆಯನ್ನು ನಾವು ಕಾಣುವುದು ಉಪನಿಷತ್ತುಗಳಲ್ಲಿ.

ಉಪನಿಷತ್ತುಗಳಲ್ಲಿ ಹಲವು ಬಗೆಯ ಅನ್ವೇಷಣಾ ಪಥಗಳನ್ನು ಕಾಣುತ್ತೇವೆ. ಭೌತಿಕ ವಿಜ್ಞಾನದಂತೆ ಅವುಗಳು ಕೇವಲ ಬಾಹ್ಯ ಜಗತ್ತಿನ ರಹಸ್ಯಗಳ ಅನ್ವೇಷಣೆಯಲ್ಲಿ ತೊಡಗಿದವುಗಳಲ್ಲ. ಮನುಷ್ಯನ ಮೂಲಭೂತ ಸಮಸ್ಯೆಗಳನ್ನು ತೆಗೆದುಕೊಂಡು ಅದಕ್ಕೆ ಪರಿಹಾರವನ್ನು ಹುಡುಕಲು ಹೊರಟಂತಹವು. ಉಪನಿಷತ್ ಋಷಿಗಳ ತುಮುಲ ಆಂತರಿಕ ಮತ್ತು ಬಾಹ್ಯ ಜಗತ್ತುಗಳೆರಡಕ್ಕೂ ಸಮಾನವಾದ ಒಂದು ಮೂಲತತ್ತ್ವದೆಡೆ ಸಾಗುವ ಚಿಂತನೆಯ ಒಂದು ರಾಜಮಾರ್ಗವನ್ನು ಹುಡುಕುವುದರಲ್ಲಿತ್ತು. ಆ ರಾಜಮಾರ್ಗದಲ್ಲಿ ಮನಸ್ಸನ್ನು ಮುನ್ನಡೆಸಿ ವಿಶ್ವಸಾರತತ್ತ್ವವನ್ನು ಕಂಡುಕೊಳ್ಳುವುದರಲ್ಲಿತ್ತು. ಅವರ ಮಾರ್ಗಗಳು ಹೇಗಿದ್ದುವು? ಅದರಲ್ಲಿ ಅವರು ಸಫಲರಾದರೇ?

## ಅನ್ವೇಷಣಾ ಪಥಗಳು

೧. ಬಾಹ್ಯ ಅನ್ವೇಷಣೆ : ಮುಂಡಕ ಉಪನಿಷತ್ತು ಆರಂಭ ವಾಗುವ ಪರಿ ಇದು. ಶೌನಕನೆಂಬುವನು ಶ್ರೀಮಂತ ಗೃಹಸ್ಥ. ಅವನು ಯಾವುದನ್ನು ತಿಳಿದುಕೊಳ್ಳುವುದರಿಂದ ಎಲ್ಲವನ್ನೂ ತಿಳಿದುಕೊಳ್ಳುವಂತೆ ಆಗುವುದೋ ಅದನ್ನು ನನಗೆ ಬೋಧಿಸಿ ಎಂದು ತನ್ನ ಗುರು ಅಂಗಿರಸನನ್ನು ಕೇಳಿಕೊಳ್ಳುತ್ತಾನೆ. ಮಡಕೆ ಗಳ ಹಿಂದಿರುವ ಮಣ್ಣಿನಂತೆ, ಬೆಳ್ಳಿಪಾತ್ರೆಗಳ ಹಿಂದೆ ಇರುವ ಬೆಳ್ಳಿಯಂತೆ ಎಲ್ಲ ವಸ್ತುಗಳ ಹಿಂದಿರುವ ಒಂದೇ ಮೂಲವನ್ನು ತಿಳಿಯಲು ಅವನು ಇಚ್ಛಿಸುತ್ತಾನೆ. ಒಟ್ಟಿನಲ್ಲಿ ಇದು ಬಾಹ್ಯ ಜಗತ್ತಿನಲ್ಲಿ ಕಂಡು ಬರುವ ವಿವಿಧತೆಗಳ ಹಿಂದೆ ಇರುವ ಏಕತೆಯನ್ನು, ತತ್ತ್ವವನ್ನು ಅರಸುವ ಪ್ರಯತ್ನವಾಗಿತ್ತು.

೨. ಆಂತರಿಕ ಅನ್ವೇಷಣೆ : ಕೇನೋಪನಿಷತ್ತಿನ ಆರಂಭದಲ್ಲಿ ಶಿಷ್ಯನು ಆಶ್ಚರ್ಯಪಡುತ್ತಾನೆ : " ಯಾವುದರ ಪ್ರೇರಣೆಯಿಂದ, ಯಾವುದರಿಂದ ಆದೇಶಿಸಲ್ಪಟ್ಟು ಮನಸ್ಸು ವಿಷಯವಸ್ತುಗಳ ಕಡೆ ಹೋಗುತ್ತದೆ? ಮನುಷ್ಯನ ಪ್ರಾಣ ಯಾವುದರಿಂದ ಶಕ್ತಿಯನ್ನು ಪಡೆದು ಜೀವನವನ್ನು ಧಾರಣೆ ಮಾಡುತ್ತದೆ? ಯಾವುದರ ಪ್ರೇರಣೆಯಿಂದ ಬಾಯಿಯಿಂದ ಮಾತು ಹೊರಡುತ್ತದೆ ಮತ್ತು ಕಣ್ಣುಗಳು ನೋಡುತ್ತವೆ? ಯಾವ ದಿವ್ಯಪುರುಷನಿಂದ ಅಥವಾ ತತ್ತ್ವದಿಂದ ಈ ಎಲ್ಲ ಇಂದ್ರಿಯಗಳ ಕಾರ್ಯಗಳು ನಡೆಯುತ್ತವೆ? "— ಇದು ಉಪನಿಷತ್ತುಗಳಲ್ಲಿ ಕಂಡುಬರುವ ಆಂತರಿಕ ಅನ್ವೇಷಣೆಯ ಉದಾಹರಣೆಯಾಗಿದೆ.

೩. ಮರಣಾನಂತರದ ಬದುಕು: ಬೃಹದಾರಣ್ಯಕ ಉಪನಿಷತ್ತಿನಲ್ಲಿ ಒಂದು ಸ್ವಾರಸ್ಯಕರ ಪ್ರಸಂಗ ಬರುತ್ತದೆ. ಜನಕ ಮಹಾರಾಜ ಯಾಜ್ಞವಲ್ಕ್ಯನಲ್ಲಿ ಪ್ರಾರ್ಥಿಸುತ್ತಾನೆ : "ಸ್ವಾಮಿ, ದಯವಿಟ್ಟು ಬೋಧನೆ ಮಾಡಿ" ಎಂದು. ಯಾಜ್ಞವಲ್ಕ್ಯ ಹೇಳುತ್ತಾನೆ: "ನೀನು ಬಹಳ ಗೌರವಾನ್ವಿತ ವ್ಯಕ್ತಿ, ಬಹಳ ಶ್ರೀಮಂತ ಹಾಗೂ ವೇದೋಪನಿಷತ್ತುಗಳನ್ನು ಅಧ್ಯಯನ ಮಾಡಿರುವ ವಿದ್ವಾಂಸ. ಒಬ್ಬನು ಬಹುದೂರ ಹೋಗಲು ಇಚ್ಛಿಸುತ್ತಾನೆ ಎಂದು ಭಾವಿಸೋಣ. ಅವನು ಒಂದು ರಥವನ್ನೋ, ನದಿಯಲ್ಲಿ ಪ್ರಯಾಣ ಮಾಡುವುದಾದರೆ ದೋಣಿಯನ್ನೋ ಪಡೆದುಕೊಳ್ಳುತ್ತಾನೆ. ಅದೇ ರೀತಿಯಲ್ಲಿ ಎಲ್ಲರ ಜೀವನದಲ್ಲಿ ಬರುವ ಕಡೆಯ ಪಯಣವಾದ ಮರಣಯಾತ್ರೆಗೆ ನಿನ್ನ ಮನಸ್ಸನ್ನು ಸಿದ್ಧ ಮಾಡಿಕೊಂಡಿದ್ದೀಯೇನು? ಈ ದೇಹವನ್ನು ಬಿಟ್ಟಮೇಲೆ ನೀನು ಎಲ್ಲಿಗೆ ಹೋಗುತ್ತೀಯೆ ಎಂದು ನಿನಗೆ ತಿಳಿದಿದೆಯೇ? " ಜನಕ "ನನಗೆ



ವಿವೇಕಪ್ರಭ ಕಾರ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಸ್ವಾಮಿ ವೀರೇಶಾನಂದರು ಈ ಲೇಖನದಲ್ಲಿ ಉಪನಿಷತ್ತುಗಳಲ್ಲಿ ಬರುವ ಭಾವನೆಗಳನ್ನು ಸಮಗ್ರವಾಗಿ, ಸರಳವಾಗಿ ಪರಿಚಯಿಸಿದ್ದಾರೆ.

ತಿಳಿಯದು" ಎಂದು ಹೇಳುತ್ತಾನೆ. ಆನಂತರ ಯಾಜ್ಞವಲ್ಕ್ಯ ಹೇಳುತ್ತಾನೆ, "ಹಾಗಾದರೆ ನಾನು ಆ ಬಗ್ಗೆ ಉಪದೇಶ ಮಾಡುತ್ತೇನೆ." ಮರಣಾನಂತರದ ಜೀವನದ ಇದೇ ಬಗೆಯ ಅನ್ವೇಷಣೆಯನ್ನು ನಾವು ಕಠೋಪನಿಷತ್ತಿನಲ್ಲಿಯೂ ಕಾಣುತ್ತೇವೆ. ನಮ್ಮ ಶಾಸ್ತ್ರ ಸಾಹಿತ್ಯದಲ್ಲಿ, ತಾನೇ ತಾನಾಗಿ ಮೃತ್ಯುವನ್ನು ಸಮೀಪಿಸಿದ ಏಕೈಕ ವ್ಯಕ್ತಿ ನಚಿಕೇತ ಎಂದು ಕಾಣುತ್ತದೆ. ಅಷ್ಟೇ ಅಲ್ಲ, ಸಾವಿನಾಚೆಗಿನ ಜೀವನದ ರಹಸ್ಯವನ್ನು ಅನಾವರಣ ಮಾಡುವಂತೆ ಸಾವಿನ ದೇವತೆಯನ್ನೇ ಒತ್ತಾಯ ಮಾಡಿದವನೂ ಅವನೊಬ್ಬನೇ ಇರಬೇಕು.

ಹೀಗೆ ಉಪನಿಷತ್ತುಗಳ ಅನ್ವೇಷಣೆ ಬಾಹ್ಯ ಮತ್ತು ಆಂತರಿಕ ಎರಡೂ ರೀತಿಯದಾಗಿವೆ. ಈ ಅನ್ವೇಷಣೆ ಮೂರು ಮಾರ್ಗಗಳಲ್ಲಿ ಸಾಗುತ್ತದೆ : ೧. ಈ ಭೌತಿಕ ಜಗತ್ತಿನ ಹಿಂದೆ ಇರುವ ತತ್ತ್ವವನ್ನು ತಿಳಿದುಕೊಳ್ಳುವುದು, ೨. ಒಬ್ಬನ ವ್ಯಕ್ತಿತ್ವದ ಒಳಪದರಗಳಾದ ಇಂದ್ರಿಯಗಳು, ಮನಸ್ಸು ಮತ್ತು ಬುದ್ಧಿಯ ಹಿಂದೆ ಇರುವ ವ್ಯಕ್ತಿತ್ವದ ನೈಜ ಸ್ವರೂಪವನ್ನು ಅರಿತುಕೊಳ್ಳುವುದು ಮತ್ತು ೩. ಸಾವಿನ ಅನಂತರದ ಜೀವನದ ಬಗ್ಗೆ ಆಸಕ್ತಿ ಮತ್ತು ವಿಚಾರ. ಹೀಗೆ ಮೂರು ಮುಖಗಳ ಅನ್ವೇಷಣೆಯನ್ನು ಉಪನಿಷತ್ತುಗಳಲ್ಲಿ ಕಾಣುತ್ತೇವೆ.

ಉಪನಿಷತ್ತುಗಳ ಈ ವಿಚಾರಾನ್ವೇಷಣೆಯ ಮಾರ್ಗದಲ್ಲಿ ನಾವು ನಡೆಯತೊಡಗುವುದೇ ಅದು ಒಂದು ಅದ್ಭುತ ಪಯಣ. ರೋಚಕವಾದ ಈ ಅನ್ವೇಷಣಾ ಯಾತ್ರೆಯಲ್ಲಿ ಮುಂದೆ ಮುಂದೆ ಹೋದಂತೆಲ್ಲ ಬರೀ ತೋರಿಕೆಯ ಈ ಬಾಹ್ಯ ಜಗತ್ತಿನ ಹಿಂದೆ ಅವ್ಯಕ್ತವೂ ಅಜ್ಞಾತವೂ ಆಗಿ ಉಳಿದಿರುವ ಆಂತರಿಕ ಸತ್ಯದ ಪರಮ ರಹಸ್ಯವು ಅನಾವರಣಗೊಳ್ಳುತ್ತ ಹೋಗುವುದು.

### ಉಪನಿಷತ್ತು ಎಂದರೇನು ?

ಸಂಸ್ಕೃತದಲ್ಲಿ **ಸದ್** ಎನ್ನುವ ಧಾತುವಿದೆ. ಈ ಧಾತುವಿಗೆ **ಉಪ** ಮತ್ತು ನಿ ಎಂಬ ಎರಡು ಉಪಸರ್ಗಗಳು ಸೇರಿ ಉಪನಿಷದ್ ಎಂದಾಗಿದೆ, **ಉಪ** (ಸಮೀಪಿಸುವುದು) – ನಿ(ನಿಷ್ಠೆಯಿಂದ)–**ಸದ್**. **ಸದ್** ಧಾತುವಿಗೆ ಮೂರು ಅರ್ಥಗಳು. ಮೊದಲನೆಯದು **ವಿಶರಣ**, ಅಂದರೆ ಹಿಂಸಿಸುವುದು, ನಾಶಮಾಡುವುದು. ಎರಡನೆಯದು **ಗತಿ**, ಅಂದರೆ ಕರೆದುಕೊಂಡು ಹೋಗುವುದು. ಮತ್ತು ಮೂರನೆಯದು **ಅವಸಾದನ**, ಅಂದರೆ **ಶಿಥಿಲಗೊಳಿಸುವುದು**. ಶ್ರೀಶಂಕರಾಚಾರ್ಯರು ಉಪನಿಷತ್ತು ಯಾವ ವಿದ್ಯೆಯನ್ನು ಬೋಧಿಸುತ್ತದೆಯೋ ಆ ವಿದ್ಯೆಗೆ ಈ ಮೂರೂ ಅರ್ಥಗಳು ಸರಿಯಾಗಿ ಹೊಂದಿಕೊಳ್ಳುತ್ತವೆ ಎನ್ನುತ್ತಾರೆ.

೧. **ವಿಶರಣ** : ಅವಿದ್ಯೆಯೇ ಸಂಸಾರ ಅಥವಾ ಜನನಮರಣ ಚಕ್ರಕ್ಕೆ ಮೂಲ. ನಮ್ಮೆಲ್ಲ ದುಃಖಕ್ಕೆ ಸಂಸಾರವೇ ಕಾರಣ. ಅವಿದ್ಯೆಯಿಂದ ಕಾಮ, ಕಾಮದಿಂದ ಕರ್ಮ, ಕರ್ಮದಿಂದ ಜನ್ಮ, ಹುಟ್ಟಿದವನಿಗೆ ಸಾವು ನಿಶ್ಚಿತ. ಹೀಗಿದೆ ಸಂಸಾರದ ಈ ವಿಷಚಕ್ರ. ಇದರಿಂದ ತಪ್ಪಿಸಿಕೊಳ್ಳಲು ಅವಿದ್ಯೆಯ ಆಮೂಲಾಗ್ರ ವಿನಾಶವೇ ಉಪಾಯ. ಇದು ಸಾಧ್ಯವಾಗುವುದು ಉಪನಿಷತ್ತು ಎಂದು ಕರೆಸಿಕೊಳ್ಳುವ ಈ ವಿದ್ಯೆಯಿಂದ.

೨. **ಗತಿ** : ಪರಬ್ರಹ್ಮನೆಡೆಗೆ ನಮ್ಮನ್ನು ಕರೆದುಕೊಂಡು ಹೋಗುತ್ತದೆ ಎನ್ನುವ ಅರ್ಥದಲ್ಲಿಯೂ ಈ ವಿದ್ಯೆಯನ್ನು ಉಪನಿಷತ್ ಎನ್ನುತ್ತೇವೆ. ಆದರೆ ನಿಜವಾಗಿ ನಾವು ಎಲ್ಲೂ ಹೋಗುವುದಿಲ್ಲ. ಈ ವಿದ್ಯೆ ಪರವಸ್ತುವಿನ ಅಥವಾ ಬ್ರಹ್ಮದ ಜ್ಞಾನವನ್ನು ನಮಗೆ ಮಾಡಿಸುತ್ತದೆ ಎಂದಷ್ಟೆ ಇದರ ಸೂಚ್ಯಾರ್ಥ.

೩. **ಅವಸಾದನ** : ಈ ವಿದ್ಯೆಯಲ್ಲಿ ಯಾರು ನಿಷ್ಠರಾಗಿ ಇರುತ್ತಾರೋ ಅಂತಹವರ ಅವಿದ್ಯೆಯ ಬಂಧನವನ್ನು ಉಪನಿಷತ್ ಪ್ರತಿಪಾದ್ಯವಾದ ಬ್ರಹ್ಮವಿದ್ಯೆಯು ಸಡಿಲಮಾಡುತ್ತದೆ ಅಥವಾ ಗರ್ಭವಾಸ, ಜನ್ಮ, ಜರಾ, ವ್ಯಾಧಿಗಳಿಂದ ಉಂಟಾಗುವ ದುಃಖವನ್ನು ಇದು ಶಿಥಿಲಗೊಳಿಸುತ್ತದೆ.

ಈಗ ಉಪನಿಷತ್ ಎಂದರೆ ಹೀಗೆ ಅರ್ಥಮಾಡಬಹುದು: ವೈರಾಗ್ಯವಂತರಾದ ಮುಮುಕ್ಷುಗಳು ಉಪನಿಷತ್ ಎಂಬ ಹೆಸರಿನಿಂದ ಕರೆಯಲ್ಪಡುವ ವಿದ್ಯೆಯನ್ನು ಸಮೀಪಿಸುತ್ತಾರೆ, ಅದರಲ್ಲಿ ನಿಷ್ಠೆಯನ್ನಿಟ್ಟು, ಅನುಸಂಧಾನ ಮಾಡುತ್ತಾರೆ. ಹಾಗೆ ಮಾಡಿದರೆ ಸಂಸಾರಕ್ಕೆ ಕಾರಣವಾದ ಅವಿದ್ಯೆಯು ಆಮೂಲಾಗ್ರವಾಗಿ ನಾಶವಾಗುತ್ತದೆ. ಹೀಗೆ ಈ ವಿದ್ಯೆಯು ಉಪನಿಷತ್ ಎಂದು ಕರೆಸಿಕೊಳ್ಳುತ್ತದೆ. ಇದು ಶ್ರೀಶಂಕರಾಚಾರ್ಯರು ಕಠೋಪನಿಷತ್ತಿನ ತಮ್ಮ ಭಾಷ್ಯದ ಅವತರಣಿಕೆಯಲ್ಲಿ ಉಪನಿಷತ್ ಶಬ್ದಕ್ಕೆ ನೀಡುವ ವ್ಯಾಖ್ಯಾನ.

### ಮೂರು ತತ್ತ್ವಗಳು

ಪ್ರತಿಯೊಂದು ತತ್ತ್ವಶಾಸ್ತ್ರದಲ್ಲಿಯೂ ಮೂರು ತತ್ತ್ವಗಳ ಪ್ರಸ್ತಾಪ ಬರುತ್ತದೆ. ೧. **ಭಗವಂತ** ೨. **ಜೀವ** ೩. **ಜಗತ್ತು**. ಉಪನಿಷತ್ತುಗಳ ವಿಶೇಷವೇನೆಂದರೆ ಈ ಮೂರೂ ತತ್ತ್ವಗಳ ವಿಶ್ಲೇಷಣೆಯನ್ನು ಅತ್ಯಂತ ಕ್ರಮಬದ್ಧವಾಗಿ ಮಾಡಿರುವುದು ಮಾತ್ರವಲ್ಲ, ಅವುಗಳ ಏಕಸೂತ್ರತೆಯನ್ನು ಎತ್ತಿಹಿಡಿದಿರುವುದು. ಉಪನಿಷತ್ತುಗಳ ಈ ಬಗೆಯ ತಾತ್ತ್ವಿಕ ಅನ್ವೇಷಣಾ ಪಥವು ಬಹಳ ವಿಶಿಷ್ಟವಾದುದು ಮಾತ್ರವಲ್ಲ, ಅದೊಂದು ಅತ್ಯಂತ ಉನ್ನತ ಆಧ್ಯಾತ್ಮಿಕ ಸಾಹಸವೂ ಆಗಿದೆ.

### ಭಗವತ್ತತ್ತ್ವ

೧. **ಭಗವತ್ತತ್ತ್ವದ ಹಲವು ಹೆಸರುಗಳು**: ಅತ್ಯುನ್ನತ ಭಗವತ್ತತ್ತ್ವವನ್ನು ಉಪನಿಷತ್ತುಗಳು **ಸತ್, ಬ್ರಹ್ಮನ್, ಆತ್ಮನ್** ಮುಂತಾದ ಹೆಸರುಗಳಿಂದ ಕರೆಯುತ್ತವೆ. ಛಾಂದೋಗ್ಯ ಉಪನಿಷತ್ತಿನಲ್ಲಿ ***ಸದೇವ ಸೋಮ್ಯ ಇದಮಗ್ರ ಆಸೀತ್*** – ' ಮಗು, ಸೃಷ್ಟಿಗಿಂತ ಮೊದಲು ಕೇವಲ **ಸತ್** ಮಾತ್ರ ಇತ್ತು' ಎನ್ನುವ ಹೇಳಿಕೆಯನ್ನು ನಾವು ಕಾಣುತ್ತೇವೆ. ಯಾವುದು ಅಸ್ತಿತ್ವದಲ್ಲಿ ಇದೆಯೋ ಅಂದರೆ ಯಾವುದು ನಿಜವಾಗಿಯೂ ಇರುವುದೋ ಅದನ್ನು **ಸತ್** ಎನ್ನುತ್ತೇವೆ. **ಸತ್** ಎಂಬ ಪದದಿಂದಲೇ ಸತ್ಯದ ಕಲ್ಪನೆ ನಮಗೆ ಬರುತ್ತದೆ. ಸತ್ಯವಾಗಿರುವುದು ಸತ್. ಈ ಸತ್ ವಸ್ತುವಿನಿಂದಲೇ ಇಡೀ ಜಗತ್ತು ವ್ಯಕ್ತವಾಯಿತು ಎನ್ನುವುದು ಉಪನಿಷತ್ತುಗಳ ಅಭಿಪ್ರಾಯ.

೨. ನಿರ್ಗುಣಪರಬ್ರಹ್ಮದ ವರ್ಣನೆ : ಉಪನಿಷತ್ತಿನಲ್ಲಿ ನಾವು ಕಾಣುವುದು ನಿರ್ಗುಣಪರಬ್ರಹ್ಮದ ವರ್ಣನೆಯನ್ನು. ೧.ಇದು ನಿರಾಕಾರ ತತ್ತ್ವ, ಸರ್ವವ್ಯಾಪಕ, ಎಲ್ಲವನ್ನೂ ತುಂಬಿಕೊಂಡಿರುವ ಚೈತನ್ಯ. ೨. ಪರಬ್ರಹ್ಮವು ಈ ಜಗತ್ತಿನ ಪ್ರಕಾಶರೂಪವಾದದ್ದು, ಜೀವರೂಪವಾದದ್ದು, ಪ್ರಭುವು. ಅದು ಎರಡಿಲ್ಲದ ಒಂದೇ ವಸ್ತು. ೩.ಇಂದ್ರ, ವರುಣ, ವಾಯು, ರುದ್ರ ಇವರೆಲ್ಲರೂ ಈ ಅತ್ಯಂತ ಶ್ರೇಷ್ಠವಾದ, ಅಭೌತಿಕವಾದ ಪರಬ್ರಹ್ಮನ ಅಭಿವ್ಯಕ್ತಿಗಳೇ ಆಗಿದ್ದಾರೆ. ಹೀಗೆ ಹಲವು ವಿಧಗಳ ನಿರ್ಗುಣ ಪರಮಾತ್ಮನ ವರ್ಣನೆ ಉಪನಿಷತ್ತುಗಳಲ್ಲಿ ಬರುತ್ತದೆ. ಅದರ ಒಂದು ಉದಾಹರಣೆ:

> ಅಶಬ್ದಮಸ್ಪರ್ಶಮರೂಪಮವ್ಯಯಮ್
> ತಥಾರಸಂ ನಿತ್ಯಮಗಂಧವಚ್ಚ ಯತ್
> ಅನಾದ್ಯನಂತಂ ಮಹತಃ ಪರಂ ಧ್ರುವಂ
> ನಿಚಾಯ್ಯ ತಂ ಮೃತ್ಯುಮುಖಾತ್ ಪ್ರಮುಚ್ಯತೇ
> (ಕಠೋಪನಿಷತ್ತು, ೧.೩.೧೫)

ಬ್ರಹ್ಮವಸ್ತುವಿನಲ್ಲಿ ಕೇಳಲು ಯಾವುದೇ ಶಬ್ದಗಳಿಲ್ಲ, ಅದಕ್ಕೆ ರೂಪವೂ ಇಲ್ಲ, ಆಸ್ವಾದನೆ ಮಾಡಲು ಯಾವ ರಸವೂ ಇಲ್ಲ, ಮೂಸಿ ಗ್ರಹಿಸಲು ಗಂಧ ಅಥವಾ ವಾಸನೆಯೂ ಇಲ್ಲ. ಇವೆಲ್ಲ ಗುಣಗಳಿದ್ದರೆ, ಆ ಗುಣಗಳಲ್ಲಿ ವ್ಯತಿರೇಕ ಆದರೆ ಮಾತ್ರ ಆ ವಸ್ತುವಿನಲ್ಲಿ ಪರಿವರ್ತನೆಗಳಾಗುತ್ತವೆ ಎನ್ನುತ್ತೇವೆ. ಈ ಗುಣಗಳು ಇಲ್ಲದಿರುವುದರಿಂದ ಬ್ರಹ್ಮವಸ್ತುವು ಯಾವ ಪರಿವರ್ತನೆಯನ್ನೂ ಹೊಂದದು. ಆದ್ದರಿಂದ ಅದನ್ನು ಅವ್ಯಯ ಎಂದು ಕರೆಯುತ್ತಾರೆ. ಯಾವುದು ಅವ್ಯಯವೋ ಅದು ನಿತ್ಯವು. ನಾಶವೂ ಒಂದು ಬಗೆಯ ಪರಿವರ್ತನೆಯೇ. ಅದು ಇಲ್ಲದ್ದರಿಂದ ಬ್ರಹ್ಮನು ನಿತ್ಯನು. ಯಾವುದಕ್ಕೆ ಕಾರಣವಿಲ್ಲವೋ ಅದು ಅನಾದಿ. ಆದಿ ಇರುವ ವಸ್ತುವಿಗೆ ಒಂದು ಕಾರಣ ಇರುತ್ತದೆ, ಅಂತ್ಯವೂ ಇರುತ್ತದೆ. ಏಕೆಂದರೆ ಅದು ಕಾರ್ಯವಸ್ತುವಾಗಿದ್ದು, ಕಾರಣ ವಸ್ತುವಿನಲ್ಲಿ ಲೀನವಾಗಿ, ಅಂತ್ಯವನ್ನು ಹೊಂದುತ್ತದೆ. ಹೀಗಾಗಿ ಕಾರಣವಿಲ್ಲದಿರುವುದರಿಂದ ಆತ್ಮ ಅಥವಾ ಬ್ರಹ್ಮ ಅನಾದಿ. ಆದ್ದರಿಂದ ಅನಂತ. ಕಾರ್ಯವಸ್ತುವು ಸಾಂತ, ಯಾವುದು ಕಾರಣವಿಲ್ಲದ್ದೋ ಅದಕ್ಕೆ ಅಂತ್ಯವೇ ಇಲ್ಲ.

ಅದು ಬುದ್ಧಿಗಿಂತಲೂ ಶ್ರೇಷ್ಠವಾದುದು, ಏಕೆಂದರೆ ಅದು ಸರ್ವಜ್ಞ, ಜ್ಞಾನಸ್ವರೂಪಿ. ಅದಕ್ಕೆ ಬೆಳಗಲು ಬೇರೆಯದರ ಸಹಾಯ ಬೇಕಾಗಿಲ್ಲ. ಅದು ಸ್ವಯಂಪ್ರಕಾಶ, ಸರ್ವಸಾಕ್ಷಿ. ಏಕೆಂದರೆ ಅದು ಎಲ್ಲ ಜೀವಿಗಳ ಅಂತರಾಳದಲ್ಲಿ ಇರುವ ಆತ್ಮವಸ್ತುವೇ ಆಗಿದೆ. ಧ್ರುವಂ ಎಂದರೆ ನಿಶ್ಚಲವಾದುದು, ಚಲನೆ ಇಲ್ಲದ್ದು. ಅವಿದ್ಯೆ, ಅದರಿಂದ ಉಂಟಾಗುವ ಕಾಮ ಭಾವನೆ, ಕಾಮವನ್ನು ತೀರಿಸಿಕೊಳ್ಳುವುದಕ್ಕಾಗಿ ಮಾಡುವ ಕರ್ಮ ಈ ಉಪದ್ರವಗಳ ಕಂತೆಯೇ ನಿಜವಾದ ಮೃತ್ಯು. ನಾವು ಚೈತನ್ಯಸ್ವರೂಪರು ಎಂಬ ನಮ್ಮ ನಿಜಸ್ವರೂಪವನ್ನು ಮರೆತು ಅವಿದ್ಯೆಯ ಪಾಶಕ್ಕೆ ಅಡಿಯಾಳಾಗುವುದೇ ಸಾವು. ಬರಿಯ ದೇಹನಾಶ ಸಾವಲ್ಲ. ಆತ್ಮಜ್ಞಾನದಿಂದ ಅವಿದ್ಯಾರೂಪವಾದ ಮೃತ್ಯುವಿನಿಂದ ವಿಮೋಚನೆ ಹೊಂದಬಹುದು ಎಂದು ಶ್ರೀಶಂಕರಾಚಾರ್ಯರು ಈ ಮಂತ್ರಕ್ಕೆ ವ್ಯಾಖ್ಯಾನ ಮಾಡುತ್ತಾರೆ.

### ವಿಶ್ವ

ಪ್ರತಿಯೊಂದು ತತ್ತ್ವಶಾಸ್ತ್ರದಲ್ಲಿಯೂ ನಾವು ಕಾಣುವ ಎರಡನೆಯ ತತ್ತ್ವವೆಂದರೆ ವಿಶ್ವ ಅಥವಾ ಜಗತ್ತು. ವಿಶ್ವಸೃಷ್ಟಿಯ ಹಲವಾರು ವಿವರಣೆಗಳನ್ನು ಉಪನಿಷತ್ತುಗಳಲ್ಲಿ ಕಾಣುತ್ತೇವೆ. ಇದು ನಿಜವಾಗಿಯೂ ಸೃಷ್ಟಿಯಲ್ಲ, ಚಕ್ರದಂತಿರುವ ಕ್ರಿಯೆ. ಸೂಕ್ಷ್ಮ ಅಥವಾ ಅವ್ಯಕ್ತ ಸ್ಥಿತಿಯಿಂದ ಸ್ಥೂಲ ಅಥವಾ ವ್ಯಕ್ತ ಸ್ಥಿತಿಗೆ ಬರುವುದನ್ನೇ ಲೋಕದಲ್ಲಿ ಸೃಷ್ಟಿ ಎಂದು ಕರೆಯುತ್ತಾರೆ. ಹಾಗೆಯೇ ಈ ಪ್ರಪಂಚವು ವ್ಯಕ್ತ ಅಥವಾ ಸ್ಥೂಲ ಸ್ಥಿತಿಯಿಂದ ಅವ್ಯಕ್ತ ಅಥವಾ ಸೂಕ್ಷ್ಮಾವಸ್ಥೆಗೆ ಹೋಗುತ್ತದೆ. ಅದನ್ನೇ ಲೋಕದಲ್ಲಿ ಪ್ರಳಯ ಎಂದು ಕರೆಯುತ್ತಾರೆ. ಎಲ್ಲ ಜೀವಿಗಳೂ ಪರತತ್ತ್ವವಾದ ಬ್ರಹ್ಮದಿಂದಲೇ ಹೊರಬರುತ್ತವೆ, ಬ್ರಹ್ಮನಲ್ಲಿಯೇ ಜೀವಿಸುತ್ತವೆ, ಬ್ರಹ್ಮನಲ್ಲಿಯೇ ಲಯವನ್ನು ಹೊಂದುತ್ತವೆ ಎನ್ನುವುದು ಉಪನಿಷತ್ತುಗಳ ಸಿದ್ಧಾಂತ.

ಪ್ರಪಂಚದ ಬಗೆಗೆ ಉಪನಿಷತ್ತುಗಳಲ್ಲಿ ಕಾಣಬರುವ ಎರಡನೆಯ ಭಾವನೆ ಎಂದರೆ ಬ್ರಹ್ಮವೇ ವಿಶ್ವದ ಉಪಾದಾನ ಮತ್ತು ನಿಮಿತ್ತ ಕಾರಣ ಎನ್ನುವುದು. ಉದಾಹರಣೆಗೆ ಮಡಕೆಗೆ ಉಪಾದಾನ ಕಾರಣ ಮಣ್ಣು, ನಿಮಿತ್ತ ಕಾರಣ ಕುಂಬಾರ. ಒಂದೇ ಮಣ್ಣಿನಿಂದ ಒಬ್ಬನೇ ಕುಂಬಾರ ವಿವಿಧ ರೂಪಗಳ ಮಡಕೆಗಳನ್ನು ಮಾಡುತ್ತಾನೆ. ಅದೇ ರೀತಿ ನಾವು ಪ್ರಪಂಚದಲ್ಲಿ ಕಾಣುವ ವಿವಿಧತೆಗಳಿಗೆ ಕಾರಣವಾಗಿರುವುದು ಮತ್ತು ಅದಷ್ಟೇ ಅಲ್ಲ, ಆ ಎಲ್ಲ ರೂಪಗಳೂ ಆಗಿರುವುದು ಒಂದೇ ಬ್ರಹ್ಮತತ್ತ್ವ. ಮಣ್ಣು ವಿವಿಧ ರೂಪಗಳಲ್ಲಿದ್ದರೂ ನಿಜವಾಗಿ ಅವೆಲ್ಲ ಮಣ್ಣೇ. ಅದೇ ರೀತಿ ಈ ವಿಶ್ವದಲ್ಲಿ ಕಾಣಬರುವ ವೈವಿಧ್ಯಗಳೆಲ್ಲ ನಿಜವಾಗಿ ಬ್ರಹ್ಮವೇ. ನಿಜವಾಗಿ ಮಡಕೆಗಳಲ್ಲಿ ಮಣ್ಣು ಎನ್ನುವುದೇ ಸತ್ಯ. ಅದೇ ರೀತಿ ಬ್ರಹ್ಮವೊಂದೇ ಸತ್ಯ.

### ಜೀವ

ಮೂರನೆಯ ತತ್ತ್ವವೆಂದರೆ ಜೀವ. ಉಪನಿಷತ್ತುಗಳಲ್ಲಿ ಶರೀರದಲ್ಲಿರುವ ಚೈತನ್ಯವನ್ನು ಪ್ರತ್ಯಕ್-ಒಳಗೆ ಇರುವ ಆತ್ಮ ಎಂದು ಕರೆಯುತ್ತೇವೆ. ಐತರೇಯ ಉಪನಿಷತ್ತಿನಲ್ಲಿ, ಋಷಿಗಳು ಹೀಗೆ ವಿಚಾರ ಮಾಡುವುದು ಕಂಡುಬರುತ್ತದೆ: "ನಾವು ಆತ್ಮವೆಂದು ಉಪಾಸನೆ ಮಾಡುತ್ತೇವಲ್ಲ, ಅದು ಯಾವುದು? ಯಾವುದರಿಂದ ನಾವು ನೋಡುತ್ತೇವೆಯೋ, ಕೇಳುತ್ತೇವೆಯೋ, ವಾಸನೆಯನ್ನು ಮೂಸಿ ನೋಡುತ್ತೇವೆಯೋ ಇದು ಅದೇ ಏನು? ಯಾವುದರಿಂದ ಒಬ್ಬನು ಮಾತನಾಡುತ್ತಾನೋ, ಒಬ್ಬನು ರುಚಿ ನೋಡುತ್ತಾನೋ, ಅದೇ ಏನು ಇದು? "

ಹೀಗೆ ವಿಚಾರ ಮಾಡಿ ಅವರು ಮುಂದಿನ ನಿಷ್ಕರ್ಷೆಗೆ ಬರುತ್ತಾರೆ: ಚೈತನ್ಯವೇ ಇದೆಲ್ಲವೂ ಆಗಿ ಪರಿಣಮಿಸಿದೆ. ತಾನು

ಮಾಡುವ ಬೇರೆ ಬೇರೆ ಕಾರ್ಯಗಳಿಗೆ ಅನುಸಾರವಾಗಿ, ಈ ಚೈತನ್ಯವೇ ಬೇರೆ ಬೇರೆ ಹೆಸರುಗಳನ್ನು ಪಡೆದುಕೊಂಡಿದೆ. ಯಾವುದರಿಂದ ಕಣ್ಣು ನೋಡುತ್ತದೆಯೋ, ಅದೇ ಇದು. ಯಾವುದರಿಂದ ಕಿವಿ ಕೇಳುತ್ತದೆಯೋ ಅದೇ ಇದು. ಬುದ್ಧಿಯ ಮೂಲಕ ಇಂದ್ರಿಯಗಳ ಜೊತೆಗೆ ತಾದಾತ್ಮ್ಯ ಹೊಂದಿದ ಆತ್ಮ ಚೈತನ್ಯ ಬೇರೆ ಬೇರೆ ಕೆಲಸಗಳನ್ನು ಮಾಡುವಂತೆ ತೋರುತ್ತದೆ. ಅಂತಹ ಸಾಕ್ಷೀ ಚೈತನ್ಯವಾದ ಆತ್ಮಸ್ವರೂಪವೆ ನಮ್ಮ ಉಪಾಸನೆಗೆ ಯೋಗ್ಯವಾದುದು. ಯಾವುದರ ಅನುಭವಕ್ಕಾಗಿ, ಈ ಇಂದ್ರಿಯ, ಮನಸ್ಸು, ಬುದ್ಧಿಗಳೆಲ್ಲವೂ ಕಾರ್ಯವೆಸಗುತ್ತವೆಯೋ, ಅಂತಹ ಪ್ರತ್ಯಗಾತ್ಮ ವಸ್ತುವೇ ಅದು. ಈ ಚೈತನ್ಯವೇ ಎಲ್ಲ ಜ್ಞಾನವನ್ನೂ ಬೆಳಗುತ್ತವೆ. ಎಲ್ಲ ಅವಸ್ಥೆಗಳಲ್ಲಿಯೂ (ಜಾಗ್ರತ್, ಸ್ವಪ್ನ, ಸುಷುಪ್ತಿ) ಮನಸ್ಸಿನ ಎಲ್ಲ ವೃತ್ತಿಗಳನ್ನೂ ಬೆಳಗುವ ಆತ್ಮ ಚೈತನ್ಯವೇ ಅದು.

ಬೇರೆ ಬೇರೆ ಉಪನಿಷತ್ತುಗಳಲ್ಲಿ ಈ ಪ್ರತ್ಯಗಾತ್ಮನನ್ನು ಬೇರೆ ಬೇರೆ ರೀತಿಯಿಂದ ಬಣ್ಣಿಸಲಾಗಿದೆ. ಅವುಗಳ ಕೆಲವು ಸ್ವಾರಸ್ಯಕರ ನಿದರ್ಶನಗಳು ಹೀಗಿವೆ.

೧. **ಕಠೋಪನಿಷತ್ತಿನಲ್ಲಿ** ಈ ಪ್ರತ್ಯಗಾತ್ಮನನ್ನೇ **ಭೋಕ್ತಾ**— ಭೋಗಿಸುವವನು ಎಂದು ಕರೆಯಲಾಗಿದೆ. ಶ್ರೀಶಂಕರಾಚಾರ್ಯರ ಪ್ರಕಾರ ಶುದ್ಧ ಆತ್ಮನಿಗೆ ಭೋಕ್ತೃತ್ವವಿಲ್ಲ. ಬುದ್ಧಿ ಮನಸ್ಸುಗಳ ಉಪಾಧಿಗಳ ಮೂಲಕವೇ ಅದಕ್ಕೆ ಭೋಕ್ತೃತ್ವವು ಸಿದ್ಧವಾಗುತ್ತದೆ. ಪರಿಶುದ್ಧ ಆತ್ಮ ಯಾವುದನ್ನೂ ಭೋಗಿಸುವುದಿಲ್ಲ.

೨. **ತೈತ್ತಿರೀಯ ಉಪನಿಷತ್ತಿನಲ್ಲಿ** ಇದನ್ನು **ಆನಂದ** ಎಂದು ಬಣ್ಣಿಸಲಾಗಿದೆ. ಇಲ್ಲಿ ಕೋಶಗಳ ಕಲ್ಪನೆ ಬರುತ್ತದೆ. ಆತ್ಮವು ಸ್ಥೂಲ ನೆಲೆಗಳೊಂದಿಗೆ ತಾದಾತ್ಮ್ಯ ಹೊಂದಿದಾಗ ಕೋಶಗಳು ಉಂಟಾಗುತ್ತವೆ. **ಅನ್ನಮಯ ಕೋಶವೆಂದರೆ** ದೇಹ, **ಪ್ರಾಣಮಯ ಕೋಶವೆಂದರೆ** ಪ್ರಾಣ, **ಮನೋಮಯ ಕೋಶವೆಂದರೆ** ಮನಸ್ಸು ಮತ್ತು **ವಿಜ್ಞಾನಮಯ ಕೋಶವೆಂದರೆ** ಬುದ್ಧಿ. ಪಾರಮಾರ್ಥಿಕವಾಗಿ ಸತ್ಯವು ಬ್ರಹ್ಮಸ್ವರೂಪವಾಗಿದ್ದರೂ, ಜೀವಿಯಲ್ಲಿ ಬಾಹ್ಯದೃಷ್ಟಿಯಿಂದ ವೈವಿಧ್ಯಗಳು ಕಾಣುವುದರಿಂದ ಅವುಗಳ ಆಧಾರದ ಮೇಲೆ ಅನ್ನಮಯ ಕೋಶ ಮುಂತಾದ ಕೋಶಗಳ ವಿಭಾಗವನ್ನು ಮಾಡಲಾಗಿದೆ ಎಂದು ಶ್ರೀಶಂಕರಾಚಾರ್ಯರು ವಿವರಣೆ ಕೊಡುತ್ತಾರೆ.

೩. **ಮಾಂಡೂಕ್ಯ ಉಪನಿಷತ್ತಿನಲ್ಲಿ** ಇದನ್ನು ಜಾಗ್ರತ್, ಸ್ವಪ್ನ ಮತ್ತು ಸುಷುಪ್ತಿಗಳೆಂಬ ಮೂರು ಅವಸ್ಥೆಗಳಲ್ಲಿಯೂ ಏಕೀಭೂತವಾಗಿರುವ ಚೈತನ್ಯಾತ್ಮಕವಾದ ಆತ್ಮವಸ್ತು ಎಂದು ಬಣ್ಣಿಸಲಾಗಿದೆ. ಈ ಅವಸ್ಥೆಗಳೊಡನೆ ಆತ್ಮವಸ್ತುವಿಗೆ ಇರುವ ಏಕೀಭಾವ ಅಜ್ಞಾನದಿಂದ ಉಂಟಾದುದು. ಆತ್ಮವಸ್ತುವಿನ ನಿಜಸ್ವರೂಪವೆಂದರೆ **ತುರೀಯಾವಸ್ಥೆ**. ಇಲ್ಲಿ ಎಲ್ಲ ದ್ವೈತ ಭಾವನೆಗಳೂ ಕೊನೆಗೊಂಡು ಕೇವಲ ಚೈತನ್ಯಾತ್ಮಕ ಸ್ಥಿತಿ ಮಾತ್ರ ಇರುವುದು.

೪. **ಕೇನ ಉಪನಿಷತ್ತಿನಲ್ಲಿ** ಆತ್ಮನನ್ನು ನಿತ್ಯಸಾಕ್ಷಿರೂಪವೆಂದು ಬಣ್ಣಿಸಲಾಗಿದೆ. ಅವನು ಶರೀರದ ಎಲ್ಲ ಕ್ರಿಯೆಗಳನ್ನು ತನ್ನ ಸಾಕ್ಷೀಭಾವದಿಂದಲೇ ಬೆಳಗುತ್ತಾನೆ.

ಮೇಲಿನ ಈ ಎಲ್ಲ ವರ್ಣನೆಗಳಲ್ಲಿಯೂ ಒಂದು ಸಾಮಾನ್ಯ ಸಂಗತಿ ಏನೆಂದರೆ, ಆತ್ಮತತ್ತ್ವವು ದೇಹ, ಮನಸ್ಸು, ಬುದ್ಧಿಗಳಿಗೆ ಅತೀತವಾದ ಚೈತನ್ಯಸ್ವರೂಪ ಎಂದು ಹೇಳಿರುವುದು. ಅಜ್ಞಾನವು ಕಳೆದು ಆತ್ಮಸಾಕ್ಷಾತ್ಕಾರವಾದಾಗ ಕೆಳಗಿನ ಸ್ತರಗಳಲ್ಲಿ ನಿಜವಾಗಿ ಅನುಭವಕ್ಕೆ ಬರುವುದೆಲ್ಲವೂ ಚೈತನ್ಯಾತ್ಮಕವಾದ ಈ ಆತ್ಮಸ್ವರೂಪವೇ ಎಂಬ ಅರಿವಾಗುತ್ತದೆ.

ಚೈತನ್ಯದ ಏಕತೆ

ನಾವೀಗ ಉಪನಿಷತ್ತುಗಳು ಬೋಧಿಸುವ ಮಹೋನ್ನತ ಅದ್ಭುತ ಸತ್ಯವೊಂದನ್ನು ಸಮೀಪಿಸುತ್ತಿದ್ದೇವೆ. ಸ್ಪಷ್ಟವಾದ ಮಾತುಗಳಲ್ಲಿ ಉಪನಿಷತ್ತುಗಳು ಚೈತನ್ಯ ಸ್ವರೂಪದಲ್ಲಿ ಯಾವ ವಿವಿಧತೆಯೂ ಇಲ್ಲ ಎಂದು ಉದ್ಘೋಷಿಸುತ್ತವೆ. ಈ ಪರಮ ಸತ್ಯವನ್ನು ನೇರವಾಗಿ, ನಿಸ್ಸಂದಿಗ್ಧವಾಗಿ ಉಪದೇಶಿಸುವ ವಾಕ್ಯಗಳೇ ಮಹಾವಾಕ್ಯಗಳು ಎನಿಸಿಕೊಳ್ಳುತ್ತವೆ. ನಾಲ್ಕು ವೇದಗಳಿಂದ ನಾಲ್ಕು ಮಹಾವಾಕ್ಯಗಳನ್ನು ಆರಿಸಿಕೊಳ್ಳಲಾಗಿದೆ.

| | | |
|---|---|---|
| ಋಗ್ವೇದ | ಐತರೇಯ ಉಪನಿಷತ್ತು | ಪ್ರಜ್ಞಾನಂ ಬ್ರಹ್ಮ |
| ಯಜುರ್ವೇದ | ಬೃಹದಾರಣ್ಯಕ ಉಪನಿಷತ್ತು | ಅಹಂ ಬ್ರಹ್ಮಾಸ್ಮಿ |
| ಸಾಮ ವೇದ | ಛಾಂದೋಗ್ಯ ಉಪನಿಷತ್ತು | ತತ್ ತ್ವಮಸಿ |
| ಅಥರ್ವ ವೇದ | ಮಾಂಡೂಕ್ಯ ಉಪನಿಷತ್ತು | ಅಯಮಾತ್ಮಾ ಬ್ರಹ್ಮ |

**ಈಶ್ವರ ಅಥವಾ ಪರಮಾತ್ಮನು** ಸರ್ವಜ್ಞ, ಸರ್ವವ್ಯಾಪಿ, ಅವನೇ ಪ್ರಭು ಎಂದೆಲ್ಲ ಹೇಳುತ್ತ ಉನ್ನತ ಗುಣಗಳು ಅವನಲ್ಲಿವೆ ಎಂದು ನಾವು ಭಾವಿಸುತ್ತೇವೆ. ಅದೇ ರೀತಿ ಜೀವನು ದುಃಖಿ, ಸಂಸಾರಿ ಎಂದೆಲ್ಲ ಹೇಳಿ ಅವನು ಕೀಳುಗುಣಗಳನ್ನು ಹೊಂದಿದವನು ಎನ್ನುತ್ತೇವೆ. ಆದರೆ ಮಹಾವಾಕ್ಯಗಳ ಪ್ರಕಾರ ಜೀವ ಮತ್ತು ಭಗವಂತನ ನಡುವೆ ಭೇದವಿದೆ ಎಂದು ತೋರಿಸುವ ಆ ಎಲ್ಲ ವಿಭಿನ್ನ ಗುಣಗಳೂ ಅವಿದ್ಯೆಯಿಂದ ಉಂಟಾದವು. ಜ್ಞಾನವೆಂದರೆ ಅವುಗಳನ್ನು ನಿರಾಕರಿಸುವುದು. ಹಾಗೆ ಮಾಡಿದಾಗ ಉಳಿಯುವುದು ಚೈತನ್ಯವೊಂದೇ. ಈ ಅಖಂಡಾರ್ಥಭಾವವನ್ನು ಮಹಾವಾಕ್ಯಗಳು ಬೋಧಿಸುತ್ತವೆ. ಹೀಗಾಗಿ ಈ ವಾಕ್ಯಗಳು ಎಲ್ಲ ಉಪನಿಷತ್ತುಗಳ ಸಾರಸರ್ವಸ್ವವಾಗಿವೆ ಎಂದು ಹೇಳಬಹುದು. ಮೇಲೆ ಹೇಳಿದ ಭೇದಕಾರಣಗಳೆಲ್ಲವೂ ಮಿಥ್ಯೆ. ಮಿಥ್ಯೆ ಎಂದರೆ ನೋಡುವುದಕ್ಕೆ ಕಂಡರೂ ನಿಜವಾಗಿ ಸತ್ಯವಲ್ಲ ಎಂದರ್ಥ. ಮಿಥ್ಯಾರೂಪವಾದ ಭೇದಕಾರಣಗಳನ್ನು ತ್ಯಜಿಸಿದಾಗ, ಚೈತನ್ಯಾತ್ಮಕವಾಗಿ ಜೀವ ಮತ್ತು ಈಶ್ವರಗಳ ನಡುವೆ ಏಕೀಭಾವ ಬರುತ್ತದೆ. ಚೈತನ್ಯವೊಂದನ್ನು ಬಿಟ್ಟು ಬೇರೆ ಏನೂ ಇಲ್ಲ ಎನ್ನುವ ಪರಮ ಜ್ಞಾನ ಉಂಟಾಗುತ್ತದೆ.

ಉಪನಿಷತ್ತುಗಳು ಈ ಪರವಸ್ತುವನ್ನೇ **ಏಕಮೇವ ಅದ್ವಿತೀಯಮ್**, ಇದಕ್ಕಿಂತ ಬೇರೆಯಾದುದು ಯಾವುದೂ ಇಲ್ಲ ಎಂದು ವರ್ಣಿಸುತ್ತವೆ. ಇಲ್ಲಿ ಜ್ಞಾನ, ಅದನ್ನು ತಿಳಿದುಕೊಳ್ಳುವ **ಜ್ಞಾತೃ**, ಮತ್ತು ತಿಳಿಯಬೇಕಾದ ಜ್ಞೇಯ ಮೂರೂ ಒಂದೇ ಆಗಿ ಪರಿಣಮಿಸುತ್ತವೆ. ಆದ್ದರಿಂದಲೇ **ಬ್ರಹ್ಮವಿದ್ ಬ್ರಹ್ಮೈವ ಭವತಿ**, ಬ್ರಹ್ಮವನ್ನು ತಿಳಿದವನು ಬ್ರಹ್ಮನೇ ಆಗುತ್ತಾನೆ ಎನ್ನುತ್ತವೆ ಉಪನಿಷತ್ತುಗಳು.

ಈ ಗಹನವಾದ ವಿಷಯವನ್ನು ಶ್ರೀರಾಮಕೃಷ್ಣರು ಹೇಳುತ್ತಿದ್ದ ಒಂದು ಸುಲಭವಾದ ದೃಷ್ಟಾಂತದಿಂದ ಅರ್ಥಮಾಡಿಕೊಳ್ಳಬಹುದು. ನಾವು ಮೆಟ್ಟಿಲುಗಳನ್ನು ಹತ್ತಿ ಛಾವಣಿಗೆ ಹೋಗುತ್ತೇವೆ. ಹತ್ತುತ್ತಿರುವಾಗ ಮೆಟ್ಟಿಲುಗಳೂ ಛಾವಣಿಯೂ ಬೇರೆ ಬೇರೆ ಎಂಬ ಭಾವನೆ ನಮಗೆ ಇರುತ್ತದೆ. ಆದರೆ ಒಮ್ಮೆ ಛಾವಣಿಯ ಮೇಲೆ ಹತ್ತಿ ನಿಂತುಕೊಂಡಾಗ ಮೆಟ್ಟಿಲುಗಳೂ ಛಾವಣಿಯೂ ಒಂದೇ ವಸ್ತುವಿನಿಂದ ಮಾಡಲ್ಪಟ್ಟಿವೆ ಎಂಬ ನಿಜದ ಅರಿವು ನಮಗೆ ಆಗುತ್ತದೆ. ಅದೇ ರೀತಿ ಸಾಧಕನ ಸ್ಥಿತಿಯಲ್ಲಿ ಹಿಂದೆ ಹೇಳಿದ ಮೂರು ತತ್ತ್ವಗಳಾದ ಪರಮಾತ್ಮ, ಜಗತ್ತು ಮತ್ತು ಜೀವ ಇವುಗಳು ಬೇರೆ ಬೇರೆ ಎಂದು ಕಂಡರೂ ಸಿದ್ಧಸ್ಥಿತಿಯಲ್ಲಿ ಅವೆಲ್ಲವೂ ಚೈತನ್ಯವೇ, ಚೈತನ್ಯಾತ್ಮಕವಾಗಿ ಇರುವುದೆಲ್ಲವೂ ಒಂದೇ ಎಂದು ಗೋಚರವಾಗುತ್ತದೆ. ಇದು ವಿಜ್ಞಾನಿಯ ಸ್ಥಿತಿ ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು.

### ಆಧ್ಯಾತ್ಮಿಕ ಸಾಧನೆ

ಬ್ರಹ್ಮಜ್ಞಾನಕ್ಕಾಗಿ ಮಾಡುವ ಸಾಧನೆಯು ಎಲ್ಲಕ್ಕಿಂತಲೂ ಶ್ರೇಷ್ಠವಾದುದು. ಏಕೆಂದರೆ ಇದು ಅಮೃತತ್ವವನ್ನು ತಂದು ಕೊಡುತ್ತದೆ. ಎಲ್ಲ ಬಗೆಯ ದುಃಖ ಮತ್ತು ಮೋಹಗಳಿಂದ ಬಿಡುಗಡೆ ಮಾಡುತ್ತದೆ ಎಂದು ಉಪನಿಷತ್ತುಗಳು ಪ್ರಶಂಸಿಸುತ್ತವೆ. ಈ ಜ್ಞಾನವನ್ನು ಅವಲಂಬಿಸುವುದು ಅತ್ಯಂತ ಶ್ರೇಷ್ಠವಾದುದು. ಎಲ್ಲ ಆಧ್ಯಾತ್ಮಿಕ ಸಾಧನೆಗಳೂ ಇದನ್ನೇ ಗುರಿಯಾಗಿ ಉಳ್ಳದ್ದಾಗಿವೆ. ಸರ್ವವೇದಗಳಿಗೂ ಇದೇ ಗುರಿಯಾಗಿದೆ. ಸಾಧಕರು ಮಾಡುವ ಎಲ್ಲ ಬಗೆಯ ತಪಸ್ಸುಗಳೂ ಕೂಡ ಇದನ್ನು ಪಡೆಯಲೆಂದೇ ಆಗಿದೆ. ಇದನ್ನು ಪಡೆಯಲು ಇಚ್ಛಿಸಿಯೇ ಸಾಧಕರು ಬ್ರಹ್ಮಚರ್ಯವ್ರತವನ್ನು ಪಾಲಿಸುತ್ತಾರೆ. ಹೀಗೆ ಆಧ್ಯಾತ್ಮಿಕ ವಿದ್ಯೆಯ ಗಳಿಕೆಗೆ ಉಪನಿಷತ್ತುಗಳಲ್ಲಿ ಅತ್ಯಂತ ಪ್ರಾಶಸ್ತ್ಯವನ್ನು ನೀಡಲಾಗಿದೆ.

ಉಪನಿಷತ್ತುಗಳ ಪ್ರಕಾರ ಈ ವಿದ್ಯೆಯನ್ನು ಕಲಿಯಲು ಒಬ್ಬನು ಶಾಸ್ತ್ರವನ್ನು ತಿಳಿದವನೂ ಬ್ರಹ್ಮತತ್ತ್ವದಲ್ಲಿ ನಿಷ್ಠನಾದವನೂ ಆದ ಗುರುವನ್ನು ವಿನೀತ ಭಾವದಿಂದ ಸಮೀಪಿಸಬೇಕು. **ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ** – ಅಂತಹ ಗುರುವಿನಿಂದ, ಸಾಧಕನಾದವನು ಬ್ರಹ್ಮದ ಬಗೆಗೆ ಕೇಳಬೇಕು, ಅದರ ಬಗ್ಗೆ ಮನನ ಮಾಡಬೇಕು ಮತ್ತು ಧ್ಯಾನಿಸಬೇಕು. ಇವು ಉಪನಿಷತ್ತುಗಳು ಹೇಳುವ ಮೂರು ಮುಖ್ಯ ಸಾಧನಾ ಮಾರ್ಗಗಳು.

ಅದಕ್ಕಾಗಿ ಪ್ರಬಲ ಇಂದ್ರಿಯನಿಗ್ರಹ ಆವಶ್ಯಕ. ಕಠೋಪನಿಷತ್ತು ಅಂತಹ ಇಂದ್ರಿಯನಿಗ್ರಹ ಉಳ್ಳವನನ್ನು ಧೀರ ಎಂದು ಕರೆದಿದೆ. ಸ್ವಯಂಭೂ ಆದ ಭಗವಂತನು ಇಂದ್ರಿಯಗಳನ್ನು ಹೊರಮುಖ ಮಾಡಿಬಿಟ್ಟು ಅವುಗಳನ್ನು ಅವನತಿಗೆ ತಳ್ಳಿಬಿಟ್ಟನು. ಆದ್ದರಿಂದಲೇ ಅವು ಅಂತರಾತ್ಮನ ಬಳಿಗೆ ಸಾಗದೆ ಕ್ಷುದ್ರವಾದ ಇಂದ್ರಿಯವಸ್ತುಗಳ ಕಡೆಗೇ ಸಾಗುತ್ತಿವೆ. ಆದರೆ ಧೀರನಾದವನು ಅಮೃತತ್ತ್ವದ ಬಯಕೆಯಿಂದ ಅಂತಶ್ಚಕ್ಷುಗಳನ್ನು ತೆರೆದು ಕೇವಲ ಪ್ರತ್ಯಗಾತ್ಮನ ದರ್ಶನವನ್ನು ಮಾತ್ರ ಅಪೇಕ್ಷಿಸುತ್ತಾನೆ. ಈ ಬಗೆಯ ಸಾಧನೆ ಹರಿತವಾದ ಕತ್ತಿಯ ಅಲುಗಿನ ಮೇಲೆ ನಡೆದಂತೆ ಎಂದು ಕಠೋಪನಿಷತ್ತು ವರ್ಣಿಸುತ್ತದೆ.

### ಉಪಾಸನೆಗಳು

ಸಾಧಕನನ್ನು ಆಧ್ಯಾತ್ಮಿಕ ಮಾರ್ಗದಲ್ಲಿ ಮೆಟ್ಟಿಲು ಮೆಟ್ಟಿಲಾಗಿ ಕರೆದುಕೊಂಡುಹೋಗಲು ಉಪನಿಷತ್ತುಗಳಲ್ಲಿ ಹಲವಾರು ಉಪಾಸನೆಗಳನ್ನು ಹೇಳಲಾಗಿದೆ. ಸಾಧಾರಣ ಧಾರ್ಮಿಕ ಆಚರಣೆಗಳನ್ನು ಕೂಡ ಶ್ರೇಷ್ಠ ಮಟ್ಟದ ಧ್ಯಾನಕ್ಕೆ ಉನ್ನತೀಕರಿಸುವುದಕ್ಕೆ ಉಪಾಸನೆ ಎಂದು ಹೆಸರು. ದೈನಂದಿನ ಪ್ರಾರ್ಥನಾದಿಗಳನ್ನು ಉನ್ನತ ಸ್ತರದ ಮಾನಸಿಕ ಮಟ್ಟಕ್ಕೆ ಏರಿಸುವಂತಹ ಕ್ರಿಯೆಯೇ ಉಪಾಸನೆ ಎನ್ನಿಸಿಕೊಳ್ಳುವುದು. ಉದಾಹರಣೆಗೆ ಗಾಯತ್ರೀ ಮಂತ್ರ. ಶ್ರೀಶಂಕರಾಚಾರ್ಯರು ಉಪಾಸನೆಗೆ ಹೀಗೆ ವ್ಯಾಖ್ಯಾನ ಮಾಡುತ್ತಾರೆ– "ಉಪಾಸನೆ ಎಂದರೆ ಒಂದು ದೇವತೆಯ ರೂಪವನ್ನೋ, ವೇದಗಳಲ್ಲಿ ಉಪಾಸನೆಗೆಂದು ವಿಧಿಸಲ್ಪಟ್ಟ ಒಂದು ಭಾವನೆಯನ್ನೋ, ಮನಸ್ಸಿನ ಮೂಲಕ ಸಮೀಪಿಸುವುದು. ಅದು ತಾನೇ ಎಂಬಂತೆ ಅದರಲ್ಲಿ ಪೂರ್ಣವಾಗಿ ಐಕ್ಯಗೊಳ್ಳುವ ತನಕ ಅದರಲ್ಲಿ ಮನಸ್ಸನ್ನು ಏಕಾಗ್ರಗೊಳಿಸುವುದು." ಅಂತಹ ಒಂದು ಸಾಧನವೆಂದರೆ **ಈಶಾವಾಸ್ಯಮಿದಂ ಸರ್ವಮ್ ಯತ್ ಕಿಂಚಿತ್ ಜಗತ್ಯಾಂ ಜಗತ್**– ಈ ಜಗತ್ತಿನಲ್ಲಿ ಇರುವುದೆಲ್ಲವೂ ಪರಮಾತ್ಮನಿಂದ ಆವರಿಸಲ್ಪಡಬೇಕು.

### ಉಪನಿಷತ್ತುಗಳ ಕರೆ

ಉಪನಿಷತ್ತುಗಳು ಇಡೀ ಮಾನವಜನಾಂಗಕ್ಕೆ ಮೀಸಲಾದ ಆಧ್ಯಾತ್ಮಿಕ ಸತ್ಯವನ್ನು ಬೋಧಿಸುವ, ವಿಶ್ವಾತ್ಮಕ ವ್ಯಾಪ್ತಿಯನ್ನು ಹೊಂದಿರುವ ಸಾಹಿತ್ಯವಾಗಿವೆ. ಉಪನಿಷತ್ತಿನ ಋಷಿ ಎಲ್ಲರಿಗೂ 'ಏಳಿ, ಎದ್ದೇಳಿ, ತಿಳಿದವರನ್ನು ಸಮೀಪಿಸಿ ಜ್ಞಾನವನ್ನು ಪಡೆದುಕೊಳ್ಳಿ' ಎಂದು ಕರೆ ಕೊಡುತ್ತಾನೆ. ಛಾಂದೋಗ್ಯ ಉಪನಿಷತ್ತು ಹೇಳುತ್ತದೆ : ' ಅಲ್ಪದರಲ್ಲಿ ಸುಖವಿಲ್ಲ, ಕೇವಲ ಭೂಮ, ಅಂದರೆ ದೊಡ್ಡದರಲ್ಲಿ ಮಾತ್ರ ನಿಜವಾದ ಸುಖವಿದೆ'. ಎಲ್ಲಕ್ಕಿಂತ ದೊಡ್ಡದೆಂದರೆ ಪರಬ್ರಹ್ಮವಸ್ತು. ಅದರ ಜ್ಞಾನವನ್ನು ಪಡೆದುಕೊಳ್ಳಿರಿ ಎಂದು ಉಪನಿಷತ್ತುಗಳು ಕರೆ ನೀಡುತ್ತವೆ. ಮುಂಡಕ ಉಪನಿಷತ್ತು ' ಕೇವಲ ಪರತತ್ತ್ವದ ಚಿಂತೆಯನ್ನು ಮಾತ್ರ ಮಾಡಿರಿ. ಇದು ಅಮೃತತ್ವಕ್ಕೆ ಸೇತುವೆಯಂತಿದೆ. ಬೇರೆ ಎಲ್ಲ ಬಗೆಯ ಮಾತುಕತೆಗಳನ್ನೂ ತ್ಯಜಿಸಿರಿ' ಎಂದು ಹೇಳುತ್ತದೆ. ಸ್ವಾಮಿ ವಿವೇಕಾನಂದರ ಪ್ರಕಾರ ಉಪನಿಷತ್ತುಗಳ ಮೂಲ ಸಂದೇಶವೆಂದರೆ **ಆತ್ಮಚೈತನ್ಯದ ಸಂದೇಶ**. ಅವರು ಹೇಳುತ್ತಾರೆ: "ಆತ್ಮಚೈತನ್ಯದ್ದು ಅನಂತ ಶಕ್ತಿ.